ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ : ನಾವು ಹೋಗುವಾಗ ಜನ ನೋಡ್ರಿ ಎಂಎಲ್ಎ ಅವರೇ ರಸ್ತೆ ಹೇಗಿದೆ ಅಂತ ಅನ್ನುವಂತಹ ಪರಿಸ್ಥಿತಿ ಇದೆ. ಈಗ ಮುಖ್ಯಮಂತ್ರಿಗಳಿಗೆ ಶ್ರದ್ಧೆ ಇದೆ. ಈ ಸಮಸ್ಯೆಯನ್ನು ಯಾವ ರೀತಿಯಾಗಿ ಅವರು ಪರಿಹರಿಸಬಹುದೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಿಗೆ ನಾನು ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಇದರ ಬಗ್ಗೆ ಇಲ್ಲಿ ಉತ್ತರ ಒದಗಿಸುತ್ತಿದ್ದೇನೆ. ಗುಲ್ಬರ್ಗ ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ದಿನಾಂಕ 7–10–2005 ರಂದು ಗುಲ್ಬರ್ಗ ಪ್ರಾದೇಶಿಕ ಸಾರಿಗೆ ಕಚೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಿಮೆಂಟ್ ಕಾರ್ಖಾನೆಗಳಿಗೆ ಪತ್ರ ಬರೆದು ನಿಗದಿತ ಭಾರಕ್ಕಿಂತ ಹೆಚ್ಚು ಭಾರ ನೀಡಬಾರದೆಂದು ಸೂಚಿಸಿರುತ್ತಾರೆ. ಕಾರ್ಖಾನೆ ಮೂಲದಿಂದಲೇ ನಿಯಂತ್ರಣ ಜಾರಿಗೆ ತಂದಲ್ಲಿ ಕೇಂದ್ರ ಮೋಟಾರು ವಾಹನ ಕಾಯ್ದೆ 113 ಮತ್ತು 114ನ್ನು ಮಾರ್ಗ ಮಧ್ಯದಲ್ಲಿ ಜಾರಿಗೆ ತರುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದಂತಾಗುತ್ತದೆಂದು ತಿಳಿಸಿರುತ್ತಾರೆ. ಎಸಿಸಿ ಸಿಮೆಂಟ್ ಫ್ಯಾಕ್ಟರಿಯವರು ದಿನಾಂಕ 23–3–2006 ರಂದು ಗುಲ್ಬರ್ಗ ಸಾರಿಗೆ ಪ್ರಾದೇಶಿಕ ಕಚೇರಿಗೆ ಪತ್ರ ಬರೆದು ಅಧಿಕ ಭಾರ ಸಿಮೆಂಟನ್ನು ನೀಡುತ್ತಿಲ್ಲವೆಂದು ಘೋಷಿಸಿರುತ್ತಾರೆ. 2004–05ನೇ ಸಾಲಿನಲ್ಲಿ ಗುಲ್ಬರ್ಗ ಪ್ರಾದೇಶಿಕ ಸಾರಿಗೆ ವ್ಯಾಪ್ತಿಯಲ್ಲಿ 377 ಪ್ರಕರಣಗಳನ್ನು ದಾಖಲಿಸಿ 12,82,360/– ರೂಗಳನ್ನು ಅದರಂತೆ 2005–06 ವ್ಯಾಪ್ತಿಯಲ್ಲಿ 264 ಪ್ರಕರಣಗಳನ್ನು ದಾಖಲಿಸಿ 15,98,960/– ರೂಗಳ ದಂಡ ವಸೂಲಿ ಮಾಡಲಾಗಿದೆ. ಇವತ್ತೇನು ಶಾಸಕರು ಇನ್ನೂ ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅತಿ ಹೆಚ್ಚು ಭಾರ ಹಾಕುವ ಮೂಲಕ ರಸ್ತೆಗಳನ್ನು ದುರ್ಬಲ ಗೊಳಿಸುತ್ತಿರುವ ಬಗ್ಗೆ, ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಸರ್ಕಾರ ಕೈಗೊಳ್ಳುವುದು.

ಅಧ್ಯಕ್ಷರು : ಎಸಿಸಿ ಸಿಮೆಂಟ್ಸ್ ಇದೆಯಲ್ಲ. ಅವರು ಮತ್ತು ಆ ಪ್ರದೇಶದ ಶಾಸಕರನ್ನೆಲ್ಲ ಕೂರಿಸಿ ಸಿಮೆಂಟ್ ರಸ್ತೆ ಮಾಡಿಸುವ ಬಗ್ಗೆ ಏನಾದರೂ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಆ ಕಂಪನಿಯವರನ್ನೂ ಕರೆಸಿ ಅವರ ಜತೆ ಮಾತನಾಡಿ ಅವರೇನಾದರೂ ಶೇರ್ ಮಾಡುವುದಾದರೆ ನೋಡೋಣ.

ಅಧ್ಯಕ್ಷರು : ಮುಂದಿನದು ಅರಗ ಜ್ಞಾನೇಂದ್ರ.

(ಉ) ರಾಜ್ಯದಲ್ಲಿ ಸಿಮೆಂಟ್, ಕಬ್ಬಿಣ, ಟಾರ್ ಬೆಲೆ ಹೆಚ್ಚಾಗಿ ರಸ್ತೆ ಕಟ್ಟಡಗಳ ಕೆಲಸ ಸ್ಥಗಿತವಾಗಿರುವ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಒಂದು ಆತಂಕದ ಸ್ಥಿತಿ ಇದೆ. ಏನೆಂದರೆ ಅಭಿವೃದ್ಧಿಗಾಗಿ ಟಾರ್ ರಸ್ತೆ, ಕಟ್ಟಡಗಳಿಗೆ ಸಿಮೆಂಟ್, ಕಬ್ಬಿಣ – ಇವುಗಳ ಬೆಲೆ, ಟಾರ್‌ನ ಬೆಲೆ ಕಳೆದ ಎರಡು ತಿಂಗಳಿಂದ ಮೂರು ನಾಲ್ಕು ಹಂತದಲ್ಲಿ

ಜಾಸ್ತಿಯಾಗಿದೆ. ನವೆಂಬರ್‌ನಲ್ಲಿ ಟನ್ ಟಾರಿಗೆ 12 ಸಾವಿರ ಇದ್ದುದು ಇವತ್ತು 20 ಸಾವಿರಕ್ಕೆ ಹೋಗಿದೆ. ಹೀಗಾಗಿ ಸರ್ಕಾರದಿಂದ ಮಂಜೂರಾತಿ ಪಡೆದಿರುವ ಟಾರ್ ರಸ್ತೆ ಕೆಲಸವೆಲ್ಲ ಸ್ಥಗಿತವಾಗಿದೆ. ರಾಜ್ಯದ ಎಲ್ಲ ಗುತ್ತಿಗೆದಾರರು ಟೆಂಡರ್ ನಿಯಮದ ಪ್ರಕಾರ ಕೆಲಸ ನಿಲ್ಲಿಸಿದ್ದಾರೆ. ಅಬ್‌ನಾರ್ಮಲಾಗಿ ರೇಟ್ ಜಾಸ್ತಿಯಾಗಿದೆ. ಕೇವಲ 1 ತಿಂಗಳ ಹಿಂದೆ ಒಂದು ಚೀಲಕ್ಕೆ 140/– ರೂಪಾಯಿ ಇದ್ದ ಸಿಮೆಂಟ್ ಬೆಲೆ 225/– ರೂಪಾಯಿ ಆಗಿದೆ. ಕಬ್ಬಿಣದ ರೇಟ್ ಜಾಸ್ತಿಯಾಗಿದೆ.

ಇದಕ್ಕಾಗಿ ಇವತ್ತು ಗುತ್ತಿಗೆದಾರರು ಕೇಳುತ್ತಿದ್ದಾರೆ ನಾವು ಈ ಅಬ್‌ನಾರ್ಮಲ್ ರೇಟ್‌ನಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ ಅಂತ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದೇವೆ. ನಮ್ಮದಂತೂ ಮಲೆನಾಡು, ಇನ್ನೊಂದು ತಿಂಗಳಲ್ಲಿ ಟಾರ್ ರಸ್ತೆ ಮಾಡಿದರೆ ಆಯಿತು, ಇಲ್ಲದೇ ಇದ್ದರೆ ಮಳೆಗಾಲ ಪ್ರಾರಂಭವಾಗುತ್ತದೆ. ಆಗ ಮಲೆನಾಡಿನ ಯಾವುದೇ ಭಾಗದಲ್ಲೂ ಟಾರ್‌ರಸ್ತೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸರ್ಕಾರ ತತಕ್ಷಣ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಎಸ್‌ಆರ್ ರೇಟಿಗೂ ಇವತ್ತಿನ ಟಾರ್ ರೇಟಿಗೂ ಇರುವ ವ್ಯತ್ಯಾಸವನ್ನು ಸರ್ಕಾರ ತುಂಬಿಕೊಟ್ಟಾದರೂ ಕೆಲಸ ಮಾಡಿಸಬೇಕು. ಇಲ್ಲದೇ ಇದ್ದರೆ ಮರುಟೆಂಡರ್‌ಗಾದರೂ ಹಾಕಬೇಕು. ಅದಕ್ಕೆ ಲೇಟಾಗುತ್ತದೆ. ಸಿಮೆಂಟ್ ರೇಟ್ ಕೂಡ ಅಷ್ಟೇ. ಇದರಿಂದ ಸರ್ಕಾರದ ಅಭಿವೃದ್ಧಿ ಯೋಜನೆಗಳೆಲ್ಲ ಸ್ಥಗಿತವಾಗುತ್ತಿದೆ. ಇದೇನು ಪಿತೂರಿಯೋ, ತಂತ್ರಗಾರಿಕೆಯೋ ನಮಗೆ ಗೊತ್ತಿಲ್ಲ. ಟಾರ್ ಕೊಡುವ ಕಂಪೆನಿಗಳು ಏಕಾಏಕಿ ಈ ರೀತಿ ರೇಟ್ ಹೆಚ್ಚಿಸಲು ಏನಾಗಿದೆ ಎಂಬುದನ್ನು ಸರ್ಕಾರ ಗಮನಿಸಬೇಕಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಸಿಮೆಂಟ್ ಕಂಪೆನಿಗಳೆಲ್ಲ ಸಂಘಟಿತರಾಗಿ ಇವತ್ತು ರೇಟ್ ಜಾಸ್ತಿ ಮಾಡಿದ್ದಾರೆ. ಉತ್ಪಾದನೆಯನ್ನೇ ಕಡಿಮೆ ಮಾಡಿದ್ದಾರೆ ಅಂತ ಕೇಳುತ್ತಿದ್ದೇವೆ. ಈ ರೀತಿ ಇಡೀ ದೇಶ ರಾಜ್ಯದ ಅಭಿವೃದ್ಧಿಯನ್ನು ಹಾಳು ಮಾಡುವುದಾದರೆ ಕೆಲವೇ ಕಂಪೆನಿಗಳ ಕೈಯಲ್ಲಿ ನಮ್ಮ ಅಭಿವೃದ್ಧಿ ಅನುದಾನಗಳು ಸಿಕ್ಕಿಹಾಕಿಕೊಂಡು ನರಳುವುದಾದರೆ ಇದರಿಂದ ತುಂಬಾ ತೊಂದರೆಯಗುತ್ತದೆ. ದಯಮಾಡಿ ಸರ್ಕಾರ ತತ್‌ಕ್ಷಣ ಗಮನಹರಿಸಬೇಕು. ವರ್ಕನ್ನು ಸ್ಟಾರ್ಟ್ ಮಾಡುವ ದೃಷ್ಟಿಯಿಂದ ಸರ್ಕಾರ ಏನು ಹೇಳುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಶೂನ್ಯವೇಳೆಯಲ್ಲಿ ಸೆಳೆಯುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಈಗ ವಿಶ್ವಬ್ಯಾಂಕ್ ಜತೆ ಏನು ಕರಾರು ಮಾಡಿಕೊಂಡು ಕೆಲಸ ಮಾಡಿಸುತ್ತಿದ್ದೀರಿ. 28 ದಿವಸದ ಹಿಂದಿನದು ಅಗ್ರಿಗೇಟ್ ತಗೊಂಡು ಕಾಸ್ಟನ್ನು ಇಂಡೆಕ್ಸ್ ಮಾಡಿಕೊಂಡು ಅವರಿಗೆ ಪೇಮೆಂಟ್ ಮಾಡುವುದನ್ನು ಕರಾರಿನಲ್ಲಿ ಸೇರಿಸಿದ್ದೀರಿ. ನಮ್ಮ ರಾಜ್ಯದಲ್ಲಿ ನಮ್ಮ ಫಂಡ್‌ನಲ್ಲೇನಾದರೂ ನೀವು ಕರಾರು ಮಾಡಿಕೊಂಡರೆ ನೀವು ಎಸ್‌ಆರ್‌ನ್ನು ಮಾರ್ಚಿ ಅಂತ್ಯ ಅಥವಾ ಏಪ್ರಿಲ್, ಮೇನಲ್ಲಿ ರಿವೈಸ್ ಮಾಡುತ್ತೀರಿ ಅಂತ. ಏಪ್ರಿಲ್‌ವರೆಗೂ ಅವರು ಕೆಲಸ

ಮಾಡುವುದೇ ಇಲ್ಲ. ಸಾರ್ ಮೊದಲು ಇಲಾಖೆಯವರು ಸರಕು ಕೊಡುತ್ತಿದ್ದರು ಹಿಂಗಾಗಿ ಕಂಟ್ರಾಕ್ಟರ್ಸ್ ಕೆಲಸ ಮಾಡಿ ಬಿಡೋರು. 800 ರೂಪಾಯಿ ಇದ್ದ ಟಾರ್ ಈಗ 1400 ರಿಂದ 1600 ರೂವರೆಗೂ ಹೋಗಿಬಿಟ್ಟಿದೆ. ಯಾರೂ ಬರೋಲ್ಲ. ಬಂದರೂ ಕ್ವಾಲಿಟಿ ಕೆಲಸ ಮಾಡುವುದಿಲ್ಲ. ನಿಮ್ಮ ಪ್ರೈಸ್ ಸಿಮೆಂಟ್‌ದು 150 ರೂಪಾಯಿ ಇದ್ದರೆ, 210 ರೂಪಾಯಿಗೆ ಇವತ್ತು ಮಾರ್ಕೆಟ್‌ನಲ್ಲಿ ಸಿಮೆಂಟ್ ಸಿಗುತ್ತಾ ಇಲ್ಲ. ಸ್ಟೀಲ್ 28 ಸಾವಿರ ರೂಪಾಯಿ ಆಗಿದೆ ಒಂದು ಟನ್. ಒಂದು ಸೇತುವೆ ಕಟ್ಟಲು ಆಗುತ್ತಿಲ್ಲ. ಒಂದು ರಸ್ತೆ ಮಾಡುವುದಕ್ಕೆ ಗೊತ್ತಿಲ್ಲ. ಆದ್ದರಿಂದ ವಿಶ್ವಬ್ಯಾಂಕಿನವರು ಕೆಲಸ ಮಾಡಬೇಕಾದರೆ ನೀವು ಏನು ನಿಯಮ ಇಟ್ಟಿದ್ದೀರಿ ಜಾಸ್ತಿಯಾದರೆ ಕಂಟ್ರಾಕ್ಟರ್‌ಗೆ ಜಾಸ್ತಿ ಕೊಡೋದು, ಕಮ್ಮಿಯಾದರೆ ಸರ್ಕಾರಕ್ಕೆ ಉಳಿಸಿಕೊಳ್ಳೋದು ವರ್ಲ್ಡ್ ಬ್ಯಾಂಕ್ ಅಸಿಸ್ಟೆಂಟ್ ಇರುವ ಸ್ಕೀಮ್‌ಗಳಲ್ಲಿ ರಾಜ್ಯ ಸರ್ಕಾರ ಅಗ್ರಿಮೆಂಟ್ ಮಾಡಿಕೊಂಡರೆ ಈ ಸಿಸ್ಟಮನ್ನೇ ನಮ್ಮ ಅನುದಾನದ ಕಾರ್ಯಕ್ಕೂ ಏಕೆ ಅಳವಡಿಸಬಾರದು. ಎಸ್‌ಆರ್ ಅದೂ ಇದು ಅಂತ ಅವರು ವರ್ಷವೆಲ್ಲ ಕಾಯುವುದನ್ನು ಬಿಟ್ಟು ವಿಶ್ವಬ್ಯಾಂಕ್ ಏನು ನಿಮಗೆ ಕರಾರು ಹಾಕಿ ಆ ಕಾಮಗಾರಿಗಳ ಕೆಲಸ ಮಾಡಬೇಕಾದರೆ ಟೆಂಡರ್ ಅವಾರ್ಡ್ ಮಾಡಿಸುವ ಸ್ಥಿತಿಗೆ ತಂದಿದೆ ಪಿಡಬ್ಲ್ಯೂಡಿಗೂ ಅದನ್ನೇ ತಂದುಬಿಡಿ, ಏನೂ ತಪ್ಪಾಗೋಲ್ಲ ಅದನ್ನೇನಾದರೂ ಮಾಡಲು ಆಗುತ್ತದಾ ಅಂತ ತಾವು ಹೇಳಬೇಕು.

ಶ್ರೀ ಎಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ ಇವತ್ತು ಬೆಳಿಗ್ಗೆ ಶಾಸಕರ ನಿಯೋಗದಲ್ಲಿ ಆಸ್ಫಾಲ್ಟಿಂಗ್ ಮತ್ತು ಸಿಮೆಂಟ್ ವಿಚಾರದಲ್ಲಿ ರೇಟ್ ಫ್ಲಕ್ಚುಯೇಟ್ ಆಗುತ್ತಿರುವ ಸಂದರ್ಭದಲ್ಲಿ ಟೆಂಡರ್ ಮೂಲಕ ಪಡೆದಿರುವ ಕಂಟ್ರಾಕ್ಟರ್ಸ್ ಏನಿದ್ದಾರೆ ಅವರು ಈಗ ದರಗಳು ಹೆಚ್ಚಿಗೆ ಆಗಿರುವುದರಿಂದ ಮಾಡಲಿಕ್ಕಾಗುವುದಿಲ್ಲ ಅಂತ ಹಿಂದೇಟು ಹಾಕಿರುವ ವಿಷಯ ಬೆಳಿಗ್ಗೆ ನನ್ನ ಗಮನಕ್ಕೆ ಏನು ತಂದಿದ್ದಾರೆ. ಈಗಾಗಲೇ ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿಗಳಿಗೆ ಹೇಳಿದ್ದೇನೆ. ಈ ವಿಷಯದಲ್ಲಿ ನಾವು ಏನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಳೆಗಾಲ ಪ್ರಾರಂಭವಾಗಲು ಕೆಲವು ತಿಂಗಳು ಮಾತ್ರ ಬಾಕಿ ಉಳಿದಿದೆ ಇಂತಹ ಸನ್ನಿವೇಶದಲ್ಲಿ ಆದಷ್ಟು ಬೇಗ ಕೆಲಸ ಪ್ರಾರಂಭ ಮಾಡುವುದಕ್ಕೆ ಹೊಸ ನೀತಿ ಏನು ನಾವು ತರಬೇಕಾಗಿದೆ ಅದನ್ನು ಮುಂದಿನ ಕ್ಯಾಬಿನೆಟ್‌ಗೆ ತರಲು ನಾನು ತಿಳಿಸಿದ್ದೇನೆ. ಮುಂದಿನ ವಾರ ಇದರ ಬಗ್ಗೆ ಸರ್ಕಾರದಿಂದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಪಿಡಬ್ಲ್ಯೂಡಿ ಮಾತ್ರವಲ್ಲ ನೀರಾವರಿ ಯೋಜನೆಗಳದೂ ಸಮಸ್ಯೆ ಆಗಿದೆ. ಎಲ್ಲೂ ಕೆಲಸ ಆಗುತ್ತಿಲ್ಲ. ಸಿಮೆಂಟ್ ರೇಟ್‌ನಿಂದಾಗಿ. ಮೊನ್ನೆ ಮಂತ್ರಿಗಳು ಅವರನ್ನೆಲ್ಲ ಕರೆದು ಸಭೆ ಮಾಡುತ್ತೇನೆ ಅಂತೇನೋ ಹೇಳಿದರು. ಮತ್ತೆ, ಕೆಲಮಿಟಿ ಫಂಡಿದೆ, ಆದರೆ ನೀವು ಕೊಟ್ಟಿರುವ ಟೈಂ ಮುಗಿದಿದೆ. ಅದನ್ನೂ ಸ್ವಲ್ಪ ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ.

ಶ್ರೀ ಎಚ್.ಡಿ. ಕುಮಾರಸ್ವಾಮಿ : ಇವತ್ತು ನಿಯೋಗ ಬಂದಿದ್ದಕ್ಕೋಸ್ಕರವೇ ಈಗಾಗಲೇ ಗಮನಹರಿಸಿದ್ದೇನೆ. ನೀರಾವರಿ ಇಲಾಖೆ ಕಾರ್ಯಗಳು ನಿಲ್ಲಲು ಸಿಮೆಂಟ್ ಬೆಲೆ ಹೆಚ್ಚಳ ಕಾರಣವಾಗಿದೆ. ಅದರ ಬಗ್ಗೆ ಮತ್ತು ರಸ್ತೆಗಳ ವಿಷಯದಲ್ಲೂ ಸರ್ಕಾರ ಮುಂದಿನ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನಕ್ಕೆ ಬಂದು ಕೆಲಸವನ್ನು ತೀವ್ರಗತಿಯಲ್ಲಿ ಪ್ರಾರಂಭ ಮಾಡಲು ತೀರ್ಮಾನ ಮಾಡುತ್ತೇವೆ. ಕೆಲಮಿಟಿ ಫಂಡ್‌ದು ಟೈಂ ಎಕ್ಸ್‌ಟೆನ್‌ಶನ್ ಕೇಳಿದ್ದಾರೆ ಅದಕ್ಕೂ ಗಮನಹರಿಸುತ್ತೇನೆ.

(ಊ) ಕರ್ನಾಟಕ ಲೋಕಸೇವಾ ಆಯೋಗ ಪ್ರಥಮ ದರ್ಜೆ ಸಹಾಯಕರುಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವುದರಲ್ಲಿ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಶ್ರೀ ಎಚ್. ಆಂಜನೇಯ (ಭರವಸುಸಾಗರ) : ಮಾನ್ಯ ಅಧ್ಯಕ್ಷರೆ ಕರ್ನಾಟಕ ಲೋಕಸೇವಾ ಆಯೋಗದಿಂದ 2-6-2005ರಂದು 830 ಪ್ರಥಮ ದರ್ಜೆ ಸಹಾಯಕ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತು. ಈ ಪರೀಕ್ಷೆಯಲ್ಲಿ ಕುಳಿತವರು 1,83,808 ಅಭ್ಯರ್ಥಿಗಳು. ಈ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಅಧಿಸೂಚನೆ ಹೊರಡಿಸುವ ಕಾಲದಲ್ಲಿ ಸರ್ಕಾರದಲ್ಲಿ ಇಷ್ಟು ಹುದ್ದೆ ಮಾತ್ರ ಖಾಲಿ ಇದ್ದವು. ಈಗ ವಿವಿಧ ಇಲಾಖೆಗಳಲ್ಲಿ ಸುಮಾರು ಒಂದು ಸಾವಿರ ಹುದ್ದೆಗಳು ಖಾಲಿ ಇವೆ. ಒಂದು ಸಲ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದಕ್ಕೆ ಕರ್ನಾಟಕ ಸರ್ಕಾರದಿಂದ, ಲೋಕಸೇವಾ ಆಯೋಗದಿಂದ ಎಷ್ಟು ವೆಚ್ಚವಾಗುತ್ತದೆಂದರೆ, ಒಂದೂವರೆ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಅನಂತರ, ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು ಅದಕ್ಕೆ ತಯಾರಾಗಿ ಪರೀಕ್ಷೆ ಬರೆಯುವುದಕ್ಕೆ ಬರುತ್ತಾರಲ್ಲ. ಅವರದು ಸರಾಸರಿ ಏನಿಲ್ಲವೆಂದರೂ ಐದು ಕೋಟಿ ರೂಪಾಯಿಗಳಷ್ಟಾದರೂ ಖರ್ಚಾಗುತ್ತದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು 1996ರಲ್ಲಿ ಮಾತ್ರ ತುಂಬಿದ್ದರು. ಅದಾದ ನಂತರ, ಹತ್ತು ವರ್ಷಗಳ ನಂತರ ಈ ಪರೀಕ್ಷೆ ನಡೆದಿದೆ. ಈ ಪರೀಕ್ಷೆ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಹುದ್ದೆಗಳು ಕರ್ನಾಟಕ ಸರ್ಕಾರದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆಯೋ, ಆ ಹುದ್ದೆಗಳನ್ನು ಅಧಿಕೃತವಾಗಿ ತಾವು ಲೋಕಸೇವಾ ಆಯೋಗಕ್ಕೆ ಕಳುಹಿಸಿದರೆ, ಆ ಪ್ರಕ್ರಿಯೆಯಲ್ಲೇ ಈ ಅಭ್ಯರ್ಥಿಗಳಿಗೂ ಕೂಡ ಮಾಡಿದಲ್ಲಿ ಈ ಅಭ್ಯರ್ಥಿಗಳಿಗೂ ಉದ್ಯೋಗ ದೊರಕುವ ಅವಕಾಶ ಲಭಿಸಿದಂತಾಗುತ್ತದೆ. ಎಷ್ಟೋ ಸಲ ಕೆಲವು ಹುದ್ದೆಗಳು, ಅವು ಪ್ರಥಮ ದರ್ಜೆ ಇರಬಹುದು, ಕ್ಲಾಸ್-1, ಕ್ಲಾಸ್-2 ಇರಬಹುದು, ಲೋಕಸೇವಾ ಆಯೋಗಕ್ಕೆ ನಾವು ಹುದ್ದೆಗಳನ್ನು ಕಡಿಮೆ ಕೊಟ್ಟಿರುತ್ತೇವೆ, ಆಯೋಗಕ್ಕೆ ಅನಂತರ ಜಾಸ್ತಿ ಕೊಡಬಹುದು.

ಅಧ್ಯಕ್ಷರು : ಮಾನ್ಯ ಆಂಜನೇಯರವರೆ, ಎಲ್ಲರಿಗೂ ಅವಕಾಶ ಕೊಡಬೇಕು, ತಾವು ಈಗ ಗಮನ ಸೆಳೆದಿದ್ದೀರಿ.

ಶ್ರೀ ಹೆಚ್. ಆಂಜನೇಯ : ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರನ್ನು ಹೆಚ್ಚೆಚ್ಚು ಸಂಪರ್ಕ ಮಾಡುತ್ತಿದ್ದಾರೆ. ಆ ಅಭ್ಯರ್ಥಿಗಳೆಲ್ಲರೂ